ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

## ಸ್ವಚ್ಛ ಸಂಕೀರ್ಣ ಘಟಕದ ಯಶಸ್ವಿ ನಿರ್ವಹಣೆಯೊಂದಿಗೆ

# ಸ್ವಚ್ಛತೆಯ ಕುರಿತು ಅರಿವು ಮೂಡಿಸುತ್ತಿರುವ ಮಹಿಳೆಯರು







ಪ್ರತಿ ಗ್ರಾಮದ ಆರೋಗ್ಯ ಆ ಗ್ರಾಮದ ನೈರ್ಮಲ್ಯತೆಯ ಮೇಲೆ ನಿರ್ಧರಿತವಾಗಿರುತ್ತದೆ. ಅನೈರ್ಮಲ್ಯತೆ ಅನಾರೋಗ್ಯಕ್ಕೆ ರಹದಾರಿ ಅನ್ನೋದು ಸಾರ್ವಕಾಲಿಕ ಸತ್ಯ. ಇದನ್ನರಿತ ರಾಜ್ಯದ ಪ್ರತಿ ಜಿಲ್ಲೆಯ, ಪ್ರತಿ ಗ್ರಾಮದ ಗ್ರಾಮಸ್ಥರು ತಮ್ಮ ಗ್ರಾಮದ ಸ್ವಚ್ಛತೆಗೆ ಮಹತ್ವ ನೀಡುತ್ತಿದ್ದಾರೆ.

ಇದರಲ್ಲಿ ಹಾವೇರಿ ಜಿಲ್ಲೆಯ 223 ಗ್ರಾಮ ಪಂಚಾಯಿತಿಗಳಲ್ಲಿನ ಪ್ರತಿ ಗ್ರಾಮವೂ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವುದರಲ್ಲಿ ಹಾಗೂ ಸ್ವಚ್ಛತೆಯ ಕುರಿತು ಹಲವಾರು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರಲ್ಲಿ ಯಶಸ್ಸು ಕಂಡಿವೆ.

ಮೊದಲಿಗೆ ಕಸ ಸಂಗ್ರಹನೆಗಾಗಿ ಸ್ವಚ್ಛ ವಾಹಿನಿ ಖರೀದಿಗೆ ಸ್ವಚ್ಛ ಭಾರತ್ ಮಿಷನ್ (ಗ್ರಾಮೀಣ) ಯೋಜನೆಯಡಿ 15ನೇ ಹಣಕಾಸು ಮತ್ತು ಗ್ರಾಮ ಪಂಚಾಯಿತಿ ನಿಧಿಯನ್ನು ಬಳಸಿಕೊಂಡು ಪ್ರತಿ ಗ್ರಾಮ ಪಂಚಾಯಿತಿಗೆ ಒಂದರಂತೆ ಸ್ವಚ್ಛ ವಾಹಿನಿ, ಕಸ ಸಂಗ್ರಹಿಸಲು ಪ್ರತಿ ಮನೆಗೆ ಎರಡು ಕಸದ ಬುಟ್ಟಿ ಹಾಗೂ ಕಸ ಸಂಗ್ರಹಣೆ, ವಿಂಗಡಣೆಗೆ ಅವಶ್ಯಕವಿರುವ ಪರಿಕರಗಳನ್ನು ಖರೀದಿ ಮಾಡಲಾಯಿತು. ಇದರ ಜೊತೆಗೆ ತ್ಯಾಜ್ಯದ ಸಮರ್ಪಕ ವಿಂಗಡನೆ, ವಿಲೇವಾರಿಗಾಗಿ ಸ್ವಚ್ಛ ಸಂಕೀರ್ಣ ಘಟಕದ ಸ್ಥಾಪನೆ ಕೂಡ ಮಾಡಲಾಯಿತು.

## ತ್ಯಾಜ್ಯದ ಸಮರ್ಪಕ ನಿರ್ವಹಣೆಯಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತಿರುವ ಮಹಿಳೆಯರು

ಹಾವೇರಿ ಜಿಲ್ಲೆಯ ಪ್ರತಿ ಗ್ರಾಮಗಳಲ್ಲಿ ತ್ಯಾಜ್ಯ ನಿರ್ವಹಣೆಗಾಗಿ ಸ್ವಸಹಾಯ ಸಂಘ, ಒಕ್ಕೂಟದ ಮಹಿಳೆಯರಿಗೆ ಕಸ ಸಂಗ್ರಹಣೆ, ವಿಂಗಡನೆಯ ಕುರಿತು ತರಬೇತಿ ನೀಡಲಾಯಿತು. ಇದಾದ ಬಳಿಕ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ವತಿಯಿಂದ ಸ್ವಚ್ಛ ವಾಹಿನಿ ಚಾಲನೆಗೆ ತರಬೇತಿ ನೀಡಿ, ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ವಾಹನ ಚಾಲನ ಪತ್ರವನ್ನು ಹಸ್ತಾಂತರ ಮಾಡಿಸಲಾಯಿತು.

ತರಬೇತಿ ಪಡೆದ ಮಹಿಳಾ ಸಿಬ್ಬಂದಿಗಳು ಗ್ರಾಮ ಪಂಚಾಯಿತಿ ವ್ಯಾಪ್ತಿಯಡಿ ಗ್ರಾಮಗಳಿಗೆ ತೆರಳಿ ಒಣ ಕಸ ಸಂಗ್ರಹಣೆ ಮಾಡುತ್ತಿದ್ದಾರೆ. ಜೊತೆಗೆ ಗ್ರಾಮದಲ್ಲಿನ ಮಹಿಳೆಯರಿಗೆ ಹಸಿ ಕಸ ಮತ್ತು ಒಣ ಕಸದ ಬೇರ್ಪಡಿಸುವಿಕೆ ಕುರಿತು ಮಾಹಿತಿ ನೀಡುತ್ತಿದ್ದಾರೆ. ಇದು ಗ್ರಾಮದ ಜನರಿಗೆ ಅದರಲ್ಲೂ ವಿಶೇಷವಾಗಿ ಮಹಿಳೆಯರಿಗೆ ಕಸ ವಿಂಗಡನೆಯ ಕುರಿತು ಅರಿವು ಮೂಡಿಸಲು ಸಹಕಾರಿಯಾಯಿತು.

ಸಮುದಾಯದ ಹಂತದಲ್ಲಿ ಸಂಗ್ರಹಿಸಿದ ಕಸವನ್ನು ಮಹಿಳಾ ಚಾಲಕಿಯರು ಸ್ವಚ್ಛ ಸಂಕೀರ್ಣ ಘಟಕಕ್ಕೆ ತಂದು ವಿಂಗಡನೆ ಕಾರ್ಯ ಪ್ರಾರಂಭಿಸಿ ಪ್ಲಾಸ್ಟಿಕ್, ಗ್ಲಾಸ್, ರಬ್ಬರ್, ಇತರೆ ಸಾಮಗ್ರಿಗಳನ್ನು ಬೇರ್ಪಡಿಸಿ ಪ್ರತಿ ದಿನ ಸಂಗ್ರಹವಾದ ಕಸದ ಪಮಾಣವನು. ದಾಖಲಾತಿ ನಿರ್ವಹಿಸುತಾರೆ.

## ವಿಶೇಷ ಸಾಧನೆಗೈದ ಹಾವೇರಿ ಜಿಲ್ಲೆ, ಶಿಗ್ಗಾಂವ ತಾಲ್ಲೂಕಿನ ಬನ್ನೂರು ಗ್ರಾಮ ಪಂಚಾಯಿತಿ:

ಹಾವೇರಿ ಜಿಲ್ಲೆಯ ಶಿಗ್ಗಾಂವ ತಾಲ್ಲೂಕಿನ ಬನ್ನೂರು ಗ್ರಾಮ ಪಂಚಾಯಿತಿಯ ಸ್ವಚ್ಛ ಸಂಕೀರ್ಣ ಘಟಕದಲ್ಲಿ ಕಸ ಸಂಗ್ರಹಣೆ, ವಿಂಗಡನೆಗೆ ಮಹತ್ವ ನೀಡಲಾಗಿದೆ. ಪ್ರತಿ ಮನೆಗೆ ಕಸ ಸಂಗ್ರಹಣೆಗೆ ತೆರಳುವ ಸಿಬ್ಬಂದಿಗೆ ಉತ್ತಮವಾದ ತರಬೇತಿ ನೀಡಲಾಗಿದೆ. ಗ್ರಾಮದ ನೈರ್ಮಲ್ಯದ ಸುಸ್ಥಿರತೆ ಕಾಪಾಡಲು ಮಾಹಿತಿಯನ್ನು ಸಹ ಇವರು ನೀಡುತ್ತಿದ್ದಾರೆ. ಈಗ ಗ್ರಾಮ ಪಂಚಾಯಿತಿಯಲ್ಲಿ ಕಸ ಸಂಗ್ರಹಣೆ, ವಿಂಗಡನೆ ಹಾಗೂ ಸ್ವಚ್ಛ ವಾಹಿನಿ ಚಾಲನಾ ವೃತ್ತಿಯಿಂದ ಸ್ವ ಸಹಾಯ ಸಂಘದ ಮಹಿಳೆಯರು ಸ್ವಾವಲಂಬಿ ಜೀವನ ಸಾಗಿಸುತ್ತಿದ್ದಾರೆ. ಅವರಲ್ಲೊಬ್ಬರಾದ ರೇಣುಕಾ ಸ್ವಚ್ಛ ವಾಹಿನಿ ಚಲಾಯಿಸುತ್ತಿದ್ದು ತಮ್ಮ ಅನುಭವವನ್ನು ಹಂಚಿಕೊಂಡಿದ್ದಾರೆ.

“ನಾನು ಬಡ ಕುಟುಂಬದಿಂದ ಬಂದವಳು. ಕಷ್ಟಪಟ್ಟು ವಿದ್ಯಾಭ್ಯಾಸ ಮಾಡಿ ಬಿ.ಎ ಪದವಿ ಮುಗಿಸಿ ಕೂಲಿ ಕೆಲಸಕ್ಕೆ ಹೋಗುತ್ತಿದ್ದೆ. ನಂತರ ಸಂಜೀವಿನಿ ಒಕ್ಕೂಟದ ಸದಸ್ಯಳಾದ ಬಳಿಕ ಚಾಲಕಿಯಾಗಿ ತರಬೇತಿ ಪಡೆದು ಈಗ ಒಂದು ವರ್ಷದಿಂದ ಸ್ವಚ್ಛ ವಾಹಿನಿಯ ಚಾಲಕಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಕಸ ಸಂಗ್ರಹಣೆಗೆ ತೆರಳಿದಾಗ ಗ್ರಾಮಸ್ಥರಿಗೆ ಸ್ವಚ್ಛತೆ, ಕಸ ವಿಂಗಡನೆಯ ಮಹತ್ವದ ಕುರಿತು ಜಾಗೃತಿ ಮೂಡಿಸುತ್ತಿದ್ದೇನೆ. ಸ್ವಚ್ಛ ಭಾರತ ನಿರ್ಮಾಣದಲ್ಲಿ ನನ್ನದೂ ಒಂದೂ ಪಾಲಿದೆ ಎಂಬುದೇ ಹೆಮ್ಮೆ.”

ಇದು ಸ್ವಚ್ಛ ವಾಹಿನಿ ಚಾಲಕಿಯಾದ ರೇಣುಕಾ ಹೊಸಪೇಟೆ ಬನ್ನೂರು ಅವರ ಮಾತುಗಳು. ಇಂತಹ ಹಲವಾರು ಮಹಿಳೆಯರು ಸ್ವಚ್ಛತೆಯಲ್ಲಿ ತಮ್ಮದೇ ಆದ ಕೊಡುಗೆ ನೀಡುತ್ತಿದ್ದಾರೆ. ಸ್ವಾಭಿಮಾನದ ಬದುಕನ್ನು ಕಟ್ಟಿಕೊಳ್ಳುವ ಜೊತೆಗೆ ಸ್ವಚ್ಛ ಭಾರತದ ನಿರ್ಮಾಣಕ್ಕೂ ಕೈ ಜೋಡಿದ್ದಾರೆ.

ಸ್ವಚ್ಛ ಭಾರತ ಒಂದು ಹೆಜ್ಜೆ ಸ್ವಚ್ಛತೆಯ ಕಡೆಗೆ | ಸ್ವಚ್ಛ ಸಂಕೀರ್ಣ | ಸ್ವಚ್ಛಮೇವ ಜಯತೇ | ಜಲೋತ್ಸವ ಮನೆ ಮನೆಗೆ ಗಂಗೆ | ಮನೆ ಮನೆಗೆ ಗಂಗೆ ಜಲ ಜೀವನ್ ಮಿಷನ್